# ಕರ್ನಾಟಕ (ರಾಜ್ಯದ ಸಿವಿಲ್ ಸೇವೆಗಳಲ್ಲಿಯ ಹುದ್ದೆಗಳಿಗೆ) ಮೀಸಲಾತಿ ಆಧಾರದ ಮೇಲೆ ಬಡ್ತಿ ಹೊಂದಿದ ಸರ್ಕಾರಿ ನೌಕರರ ಜ್ಯೇಷ್ಠತೆಯ ನಿರ್ಧಾರಣೆ ಅಧಿನಿಯಮ, 2002

**ಪ್ರಕರಣಗಳ ಪಟ್ಟಿ**

*ಪ್ರಕರಣಗಳು:*


1. ಸಂಕ್ಷಿಪ್ತ ಹೆಸರು ಮತ್ತು ಪ್ರಾರಂಭ
2. ಪರಿಭಾಷೆಗಳು
3. ಮೀಸಲಾತಿ ಆಧಾರದ ಮೇಲೆ ಬಡ್ತಿ ಹೊಂದಿದ ಸರ್ಕಾರಿ ನೌಕರರ ಜ್ಯೇಷ್ಠತೆಯ ನಿರ್ಧಾರಣೆ
4. 1978ರ ಏಪ್ರಿಲ್ 27ರ ತರುವಾಯದಿಂದ ಈಗಾಗಲೇ ನೀಡಲಾಗಿರುವ ತತ್ಪರಿಣಾಮದ ಜ್ಯೇಷ್ಠತೆಯ ಸಂರಕ್ಷಣೆ
5. ನಿಯಮಗಳ ರಚನಾಧಿಕಾರ
6. ತೊಂದರೆಗಳನ್ನು ನಿವಾರಿಸಲು ಅಧಿಕಾರ
7. ನಿರಸನ ಮತ್ತು ಉಳಿಸುವಿಕೆಗಳು


* * *

## ಉದ್ದೇಶಗಳು ಮತ್ತು ಕಾರಣಗಳ ಹೇಳಿಕೆ

**2002ರ ಅಧಿನಿಯಮ ಸಂಖ್ಯೆ: 10.–** ಕರ್ನಾಟಕ ಸರ್ಕಾರವು, ದಿನಾಂಕ: 27-4-1978ರ ಸರ್ಕಾರಿ ಆದೇಶ ಸಂಖ್ಯೆ: ಡಿಪಿಎಆರ್ 29 ಎಸ್‌ಬಿಸಿ 77ರ ಅನುಸಾರವಾಗಿ ಅನುಸೂಚಿತ ಜಾತಿಗಳು ಮತ್ತು ಅನುಸೂಚಿತ ಬುಡಕಟ್ಟುಗಳಿಗೆ ಸೇರಿದ ಸರ್ಕಾರಿ ನೌಕರರ ಪರವಾಗಿ ಬಡ್ತಿಯಲ್ಲಿ ಮೀಸಲಾತಿ ನೀತಿಯನ್ನು ಪ್ರಾರಂಭಿಸಿದೆ.

ಮೀಸಲಾತಿ ಆದೇಶದ 7ನೇ ಪ್ಯಾರಾದಲ್ಲಿ, ಯಾವುದೇ ಸಂದರ್ಭದಲ್ಲಿ ಆ ಆದೇಶಕ್ಕನುಸಾರವಾಗಿ ಬಡ್ತಿ ಹೊಂದಿದ ವ್ಯಕ್ತಿಗಳ ಪರಸ್ಪರ ಜ್ಯೇಷ್ಠತೆಯನ್ನು, ಕರ್ನಾಟಕ ಸರ್ಕಾರಿ ನೌಕರರ (ಜ್ಯೇಷ್ಠತೆ) ನಿಯಮಗಳು, 1957ರ 4ನೇ ಅಥವಾ 4ಎ ನಿಯಮದಲ್ಲಿ ಉಪಬಂಧಿಸಲಾದ ರೀತಿಯಲ್ಲಿ ನಿರ್ಧರಿಸತಕ್ಕದ್ದೆಂದು ವಿಧಿಸಲಾಗಿದೆ.

ಭಾರತದ ಸರ್ವೋಚ್ಚ ನ್ಯಾಯಾಲಯವು, ಎಂ.ಜಿ. ಬಡಪ್ಪನವರ್ ಹಾಗೂ ಮತ್ತೊಬ್ಬರು -ವಿರುದ್ಧ- ಕರ್ನಾಟಕ ರಾಜ್ಯ ಮತ್ತು ಇತರರು, ಸಿವಿಲ್ ಅಪೀಲು ಸಂಖ್ಯೆ 6970-6971:2000 ಇದರ ಜೊತೆಗೆ ಸಿವಿಲ್ ಅಪೀಲು ಸಂಖ್ಯೆ: 6972:2000 (ಎಐಆರ್ 2001 ಎಸ್‌ಸಿ 260) ಮೊಕದ್ದಮೆಗೆ ಸಂಬಂಧಿಸಿದ 1-12-2000ದ ತನ್ನ ತೀರ್ಪಿನಲ್ಲಿ ಮೀಸಲಿಟ್ಟ ಪ್ರವರ್ಗಗಳಿಗೆ ಮತ್ತು ಸಾಮಾನ್ಯ ಪ್ರವರ್ಗಕ್ಕೆ ಸೇರಿದ ವ್ಯಕ್ತಿಗಳ ನಡುವೆ ಪರಸ್ಪರ ಜ್ಯೇಷ್ಠತೆಯನ್ನು ನಿರ್ಧರಿಸುವ ವಿವಾದದ ಕುರಿತು ವ್ಯವಹರಿಸುವಾಗ ಅಜಿತ್‌ಸಿಂಗ್ ಮತ್ತು ಇತರರು (II) -ವಿರುದ್ಧ- ಪಂಜಾಬ್ ರಾಜ್ಯ ಮತ್ತು ಇತರರು (1999) 7 ಎಸ್‌ಸಿಸಿ 209 ಇದರಲ್ಲಿ ಸಂವಿಧಾನ ಪೀಠದ ತೀರ್ಪಿನಲ್ಲಿ ಹೇಳಿದ ತತ್ವಕ್ಕನುಸಾರವಾಗಿ ಕರ್ನಾಟಕ ಸರ್ಕಾರಿ ನೌಕರರ (ಜ್ಯೇಷ್ಠತೆ) ನಿಯಮಗಳು 1957ರ ನಿಯಮ 2 (ಸಿ), ನಿಯಮ 4 ಮತ್ತು ನಿಯಮ 4ಎ ಯನ್ನು ಪರೀಕ್ಷಿಸಿತು ಮತ್ತು (ಮೀಸಲಿಟ್ಟ) ರೋಸ್ಟರ್ ಬಿಂದುವಿಗೆ ಪ್ರತಿಯಾಗಿ ಬಡ್ತಿ ಹೊಂದಿದ ಒಬ್ಬ ವ್ಯಕ್ತಿಯ ಜ್ಯೇಷ್ಠತೆಯನ್ನು ನಿರ್ಧರಿಸುವ ಸಂಬಂಧದಲ್ಲಿ ಯಾವುದೇ ನಿರ್ದಿಷ್ಟ ನಿಯಮವಿಲ್ಲವೆಂದು ಅಭಿಪ್ರಾಯ ಪಟ್ಟಿದೆ.

ಕರ್ನಾಟಕ ಸರ್ಕಾರಿ ನೌಕರರ (ಜ್ಯೇಷ್ಠತೆ) ನಿಯಮಗಳು, 1957ರ 2ಸಿ, 4 ಮತ್ತು 4ಎ ನಿಯಮಗಳು ರೋಸ್ಟರ್ ಆಧಾರದ ಮೇಲೆ ನೀಡಲಾದ ಬಡ್ತಿಗಳ ಸಂಬಂಧದಲ್ಲಿ ಜ್ಯೇಷ್ಠತೆಯನ್ನು ನೀಡುವ ಬಗ್ಗೆ ನಿರ್ದಿಷ್ಟ ಉಪಬಂಧ ಕಲ್ಪಿಸುತ್ತಿಲ್ಲವೆಂಬ ಅಂಶ ವಾಸ್ತವಿಕವಾಗಿದ್ದರೂ ಬಡ್ತಿಯಲ್ಲಿ ಮೀಸಲಾತಿಯ ನೀತಿಯನ್ನು ಹೊಸದಾಗಿ ಜಾರಿಗೆ ತಂದಿರುವ ಮೀಸಲಾತಿ ಆದೇಶದ 7ನೇ ಪ್ಯಾರಾದಲ್ಲಿ, (ಮೀಸಲಾತಿ ಆಧಾರದ ಮೇಲೆ) ಬಡ್ತಿಯ ಯಾವುದೇ ಸಂದರ್ಭದಲ್ಲಿ ಬಡ್ತಿ ಹೊಂದಿದ ವ್ಯಕ್ತಿಗಳ ಪರಸ್ಪರ ಜ್ಯೇಷ್ಠತೆಯನ್ನು ನಿರ್ಧರಿಸುವ ವಿಧಾನವನ್ನು ವಿಧಿಸಲಾಗಿದೆ. ಮೀಸಲಾತಿ ಆದೇಶವು ಮೀಸಲಾತಿ ಆಧಾರದ ಮೇಲೆ ಬಡ್ತಿಗಳನ್ನು ನಿಯಂತ್ರಿಸುವ ಒಂದು ಸ್ವಯಂ ಪೂರ್ಣ ಸಂಹಿತೆಯಾಗಿದ್ದು ಈ ಉಪಬಂಧವು ಕರ್ನಾಟಕ ಸರ್ಕಾರಿ ನೌಕರರ (ಜ್ಯೇಷ್ಠತೆ) ನಿಯಮಗಳು, 1957 ರಲ್ಲಿ ಒಳಗೊಂಡ ಸದರಿ ನಿಯಮಗಳಿಗಿಂತ ಪ್ರತ್ಯೇಕವಾಗಿದೆ.

ಸಂಸತ್ತು, ಆ ತರುವಾಯ, ಮೀಸಲಾತಿ ಆಧಾರದ ಮೇಲೆ ಬಡ್ತಿಯ ಸಂದರ್ಭದಲ್ಲಿ ತತ್ಪರಿಣಾಮದ ಜ್ಯೇಷ್ಠತೆಯನ್ನು ನೀಡುವುದಕ್ಕಾಗಿ ಉಪಬಂಧ ಕಲ್ಪಿಸುವ ಸಂವಿಧಾನದ (ಎಂಬತ್ತೈದನೇ ತಿದ್ದುಪಡಿ) ಅಧಿನಿಯಮ, 2001ನ್ನು 17-6-1995 ರಿಂದ ಪೂರ್ವಾನ್ವಯವಾಗುವಂತೆ ಅಧಿನಿಯಮಿಸಿದೆ.

ಯಾವುದೇ ಸಂದಿಗ್ಧತೆಯನ್ನು ನಿವಾರಿಸುವುದು ಮತ್ತು ಮೀಸಲಾತಿ ಆದೇಶದಲ್ಲಿ ಒಳಗೊಂಡಿರುವ ಬಡ್ತಿಯಲ್ಲಿ ಮೀಸಲಾತಿ ನೀತಿ - ಇದಕ್ಕನುಸಾರವಾಗಿ ಬಡ್ತಿ ಹೊಂದಿದ ಅನುಸೂಚಿತ ಜಾತಿಗಳು ಮತ್ತು ಅನುಸೂಚಿತ ಬುಡಕಟ್ಟುಗಳಿಗೆ ಸೇರಿದ ಸರ್ಕಾರಿ ನೌಕರರು, ಇತರ ಪ್ರವರ್ಗಗಳಿಗೆ ಸೇರಿದ ಸರ್ಕಾರಿ ನೌಕರರಿಗೆ ಜ್ಯೇಷ್ಠತೆಯು ಲಭ್ಯವಿರುವಂತೆ ಅದಕ್ಕೆ ಹಕ್ಕುಳ್ಳವರಾಗಿರತಕ್ಕದ್ದು ಎಂಬ ಬಗ್ಗೆ ಸ್ಪಷ್ಟೀಕರಿಸುವುದು ಅವಶ್ಯಕವೆಂದು ಪರಿಗಣಿಸಲಾಗಿದೆ.

ಈ ವಿಷಯವು ತುರ್ತು ಸ್ವರೂಪದ್ದಾದ್ದರಿಂದ ಮತ್ತು ಕರ್ನಾಟಕ ವಿಧಾನಸಭೆ ಅಧಿವೇಶನದಲ್ಲಿಲ್ಲದಿದ್ದುದರಿಂದ ಕರ್ನಾಟಕ (ರಾಜ್ಯ ಸಿವಿಲ್ ಸೇವೆಗಳಲ್ಲಿಯ ಹುದ್ದೆಗಳಿಗೆ) ಮೀಸಲಾತಿ ಆಧಾರದ ಮೇಲೆ ಬಡ್ತಿ ಹೊಂದಿದ ಸರ್ಕಾರಿ ನೌಕರರ ಜ್ಯೇಷ್ಠತೆಯ ನಿರ್ಧಾರಣೆ ಅಧ್ಯಾದೇಶ (ಸಂಖ್ಯೆ 2), 2002 ನ್ನು (2002ರ ಕರ್ನಾಟಕ ಅಧ್ಯಾದೇಶ 5) ಮೇಲ್ಕಂಡ ಉದ್ದೇಶವನ್ನು ಈಡೇರಿಸುವುದಕ್ಕಾಗಿ ಪ್ರಖ್ಯಾಪಿಸಲಾಯಿತು.

ಸದರಿ ಅಧ್ಯಾದೇಶದ ಬದಲು ಈ ವಿಧೇಯಕವನ್ನು ಮಂಡಿಸಲಾಗಿದೆ.

ಆದ್ದರಿಂದ ಈ ವಿಧೇಯಕ

(2002ರ ವಿಧಾನ ಪರಿಷತ್ತಿನ ವಿಧೇಯಕ ಸಂಖ್ಯೆ 6)

# 2002ರ ಕರ್ನಾಟಕ ಅಧಿನಿಯಮ ಸಂಖ್ಯೆ 10

*(2002ರ ಆಗಸ್ಟ್ ಹದಿನಾಲ್ಕನೇ ದಿನಾಂಕದಂದು ಕರ್ನಾಟಕ ರಾಜ್ಯ ಪತ್ರದ ವಿಶೇಷ ಸಂಚಿಕೆಯಲ್ಲಿ ಪ್ರಕಟವಾಗಿದೆ)*

## ಕರ್ನಾಟಕ (ರಾಜ್ಯದ ಸಿವಿಲ್ ಸೇವೆಗಳಲ್ಲಿಯ ಹುದ್ದೆಗಳಿಗೆ) ಮೀಸಲಾತಿ ಆಧಾರದ ಮೇಲೆ ಬಡ್ತಿ ಹೊಂದಿದ ಸರ್ಕಾರಿ ನೌಕರರ ಜ್ಯೇಷ್ಠತೆಯ ನಿರ್ಧಾರಣೆ ಅಧಿನಿಯಮ, 2002

*(2002ರ ಆಗಸ್ಟ್ ಹನ್ನೆರಡನೇ ದಿನಾಂಕದಂದು ಕರ್ನಾಟಕ ರಾಜ್ಯಪಾಲರ ಅನುಮತಿಯನ್ನು ಪಡೆಯಲಾಗಿದೆ)*

ರಾಜ್ಯದ ಸಿವಿಲ್ ಸೇವೆಗಳಲ್ಲಿಯ ಹುದ್ದೆಗಳಿಗೆ ಮೀಸಲಾತಿ ಆಧಾರದ ಮೇಲೆ ಬಡ್ತಿ ಹೊಂದಿದ ಸರ್ಕಾರಿ ನೌಕರರ ಜ್ಯೇಷ್ಠತೆಯ ನಿರ್ಧಾರಣೆಗಾಗಿ ಒಂದು ಅಧಿನಿಯಮ.

ಕರ್ನಾಟಕ ಸರ್ಕಾರವು, ದಿನಾಂಕ: 27-4-1978ರ ಸರ್ಕಾರಿ ಆದೇಶ ಸಂಖ್ಯೆ: ಡಿಪಿಎಆರ್ 29 ಎಸ್‌ಬಿಸಿ 77ರ ಅನುಸಾರವಾಗಿ ಅನುಸೂಚಿತ ಜಾತಿಗಳು ಮತ್ತು ಅನುಸೂಚಿತ ಬುಡಕಟ್ಟುಗಳಿಗೆ ಸೇರಿದ ಸರ್ಕಾರಿ ನೌಕರರ ಪರವಾಗಿ ಬಡ್ತಿಯಲ್ಲಿ ಮೀಸಲಾತಿ ನೀತಿಯನ್ನು ಪ್ರಾರಂಭಿಸಿರುವುದರಿಂದ;

ಮೀಸಲಾತಿ ಆದೇಶದ 7ನೇ ಪ್ಯಾರಾದಲ್ಲಿ, ಯಾವುದೇ ಸಂದರ್ಭದಲ್ಲಿ ಆ ಆದೇಶಕ್ಕನುಸಾರವಾಗಿ ಬಡ್ತಿ ಹೊಂದಿದ ವ್ಯಕ್ತಿಗಳ ಪರಸ್ಪರ ಜ್ಯೇಷ್ಠತೆಯನ್ನು, ಕರ್ನಾಟಕ ಸರ್ಕಾರಿ ನೌಕರರ (ಜ್ಯೇಷ್ಠತೆ) ನಿಯಮಗಳು, 1957ರ 4ನೇ ಅಥವಾ 4ಎ ನಿಯಮದಲ್ಲಿ ಉಪಬಂಧಿಸಲಾದ ರೀತಿಯಲ್ಲಿ ನಿರ್ಧರಿಸತಕ್ಕದ್ದೆಂದು ವಿಧಿಸಲಾಗಿರುವುದರಿಂದ;

ಭಾರತದ ಸರ್ವೋಚ್ಚ ನ್ಯಾಯಾಲಯವು, ಎಂ.ಜಿ. ಬಡಪ್ಪನವರ್ ಹಾಗೂ ಮತ್ತೊಬ್ಬರು -ವಿರುದ್ಧ- ಕರ್ನಾಟಕ ರಾಜ್ಯ ಮತ್ತು ಇತರರು, ಸಿವಿಲ್ ಅಪೀಲು ಸಂಖ್ಯೆ 6970-6971:2000 ಇದರ ಜೊತೆಗೆ ಸಿವಿಲ್ ಅಪೀಲು ಸಂಖ್ಯೆ: 6972:2000 (ಎಐಆರ್ 2001 ಎಸ್‌ಸಿ 260) ಮೊಕದ್ದಮೆಗೆ ಸಂಬಂಧಿಸಿದ 1-12-2000ದ ತನ್ನ ತೀರ್ಪಿನಲ್ಲಿ ಮೀಸಲಿಟ್ಟ ಪ್ರವರ್ಗಗಳಿಗೆ ಮತ್ತು ಸಾಮಾನ್ಯ ಪ್ರವರ್ಗಕ್ಕೆ ಸೇರಿದ ವ್ಯಕ್ತಿಗಳ ನಡುವೆ ಪರಸ್ಪರ ಜ್ಯೇಷ್ಠತೆಯನ್ನು ನಿರ್ಧರಿಸುವ ವಿವಾದದ ಕುರಿತು ವ್ಯವಹರಿಸುವಾಗ ಅಜಿತ್‌ಸಿಂಗ್ ಮತ್ತು ಇತರರು (II) -ವಿರುದ್ಧ- ಪಂಜಾಬ್ ರಾಜ್ಯ ಮತ್ತು ಇತರರು, (1999) 7 ಎಸ್‌ಸಿಸಿ 209 ಇದರಲ್ಲಿ ಸಂವಿಧಾನ ಪೀಠದ ತೀರ್ಪಿನಲ್ಲಿ ಹೇಳಿದ ತತ್ವಕ್ಕನುಸಾರವಾಗಿ ಕರ್ನಾಟಕ ಸರ್ಕಾರಿ ನೌಕರರ (ಜ್ಯೇಷ್ಠತೆ) ನಿಯಮಗಳು 1957ರ ನಿಯಮ 2 (ಸಿ), ನಿಯಮ 4 ಮತ್ತು ನಿಯಮ 4ಎ ಯನ್ನು ಪರೀಕ್ಷಿಸಿತು ಮತ್ತು (ಮೀಸಲಿಟ್ಟ) ರೋಸ್ಟರ್ ಬಿಂದುವಿಗೆ ಪ್ರತಿಯಾಗಿ ಬಡ್ತಿ ಹೊಂದಿದ ಒಬ್ಬ ವ್ಯಕ್ತಿಯ ಜ್ಯೇಷ್ಠತೆಯನ್ನು ನಿರ್ಧರಿಸುವ ಸಂಬಂಧದಲ್ಲಿ ಯಾವುದೇ ನಿರ್ದಿಷ್ಟ ನಿಯಮವಿಲ್ಲವೆಂದು ಅಭಿಪ್ರಾಯ ಪಟ್ಟಿರುವುದರಿಂದ;

ಕರ್ನಾಟಕ ಸರ್ಕಾರಿ ನೌಕರರ (ಜ್ಯೇಷ್ಠತೆ) ನಿಯಮಗಳು, 1957ರ 2ಸಿ, 4 ಮತ್ತು 4ಎ ನಿಯಮಗಳು ರೋಸ್ಟರ್ ಆಧಾರದ ಮೇಲೆ ನೀಡಲಾದ ಬಡ್ತಿಗಳ ಸಂಬಂಧದಲ್ಲಿ ಜ್ಯೇಷ್ಠತೆಯನ್ನು ನೀಡುವ ಬಗ್ಗೆ ನಿರ್ದಿಷ್ಟ ಉಪಬಂಧ ಕಲ್ಪಿಸುತ್ತಿಲ್ಲವೆಂಬ ಅಂಶ ವಾಸ್ತವಿಕವಾಗಿದ್ದರೂ ಬಡ್ತಿಯಲ್ಲಿ ಮೀಸಲಾತಿಯ ನೀತಿಯನ್ನು ಹೊಸದಾಗಿ ಜಾರಿಗೆ ತಂದಿರುವ ಮೀಸಲಾತಿ ಆದೇಶದ 7ನೇ ಪ್ಯಾರಾದಲ್ಲಿ, (ಮೀಸಲಾತಿ ಆಧಾರದ ಮೇಲೆ) ಬಡ್ತಿಯ ಯಾವುದೇ ಸಂದರ್ಭದಲ್ಲಿ ಬಡ್ತಿ ಹೊಂದಿದ ವ್ಯಕ್ತಿಗಳ ಪರಸ್ಪರ ಜ್ಯೇಷ್ಠತೆಯನ್ನು ನಿರ್ಧರಿಸುವ ವಿಧಾನವನ್ನು ವಿಧಿಸಲಾಗಿದೆ. ಮೀಸಲಾತಿ ಆದೇಶವು ಮೀಸಲಾತಿ ಆಧಾರದ ಮೇಲೆ ಬಡ್ತಿಗಳನ್ನು ನಿಯಂತ್ರಿಸುವ ಒಂದು ಸ್ವಯಂ ಪೂರ್ಣ ಸಂಹಿತೆಯಾಗಿದ್ದು ಈ ಉಪಬಂಧವು ಕರ್ನಾಟಕ ಸರ್ಕಾರಿ ನೌಕರರ (ಜ್ಯೇಷ್ಠತೆ) ನಿಯಮಗಳು, 1957 ರಲ್ಲಿ ಒಳಗೊಂಡ ಸದರಿ ನಿಯಮಗಳಿಗಿಂತ ಪ್ರತ್ಯೇಕವಾಗಿರುವುದರಿಂದ;

ಸಂಸತ್ತು, ಆ ತರುವಾಯ, ಮೀಸಲಾತಿ ಆಧಾರದ ಮೇಲೆ ಬಡ್ತಿಯ ಸಂದರ್ಭದಲ್ಲಿ ತತ್ಪರಿಣಾಮದ ಜ್ಯೇಷ್ಠತೆಯನ್ನು ನೀಡುವುದಕ್ಕಾಗಿ ಉಪಬಂಧ ಕಲ್ಪಿಸುವ ಸಂವಿಧಾನದ (ಎಂಬತ್ತೈದನೇ ತಿದ್ದುಪಡಿ) ಅಧಿನಿಯಮ, 2001ನ್ನು 17-6-1995 ರಿಂದ ಪೂರ್ವಾನ್ವಯವಾಗುವಂತೆ ಅಧಿನಿಯಮಿಸಿರುವುದರಿಂದ;

ಯಾವುದೇ ಸಂದಿಗ್ಧತೆಯನ್ನು ನಿವಾರಿಸುವುದು ಮತ್ತು ಮೀಸಲಾತಿ ಆದೇಶದಲ್ಲಿ ಒಳಗೊಂಡಿರುವ ಬಡ್ತಿಯಲ್ಲಿ ಮೀಸಲಾತಿ ನೀತಿ - ಇದಕ್ಕನುಸಾರವಾಗಿ ಬಡ್ತಿ ಹೊಂದಿದ ಅನುಸೂಚಿತ ಜಾತಿಗಳು ಮತ್ತು ಅನುಸೂಚಿತ ಬುಡಕಟ್ಟುಗಳಿಗೆ ಸೇರಿದ ಸರ್ಕಾರಿ ನೌಕರರು, ಇತರ ಪ್ರವರ್ಗಗಳಿಗೆ ಸೇರಿದ ಸರ್ಕಾರಿ ನೌಕರರಿಗೆ ಜ್ಯೇಷ್ಠತೆಯು ಲಭ್ಯವಿರುವಂತೆ ಅದಕ್ಕೆ ಹಕ್ಕುಳ್ಳವರಾಗಿರತಕ್ಕದ್ದು ಎಂಬ ಬಗ್ಗೆ ಸ್ಪಷ್ಟೀಕರಿಸುವುದು ಅವಶ್ಯಕವೆಂದು ಪರಿಗಣಿಸಲಾಗಿದೆ.

ಇದು ಭಾರತ ಗಣರಾಜ್ಯದ ಐವತ್ಮೂರನೇ ವರ್ಷದಲ್ಲಿ ಕರ್ನಾಟಕ ರಾಜ್ಯ ವಿಧಾನ ಮಂಡಲದಿಂದ ಈ ಮುಂದಿನಂತೆ ಅಧಿನಿಯಮಿತವಾಗಲಿ:-

1. **ಸಂಕ್ಷಿಪ್ತ ಹೆಸರು ಮತ್ತು ಪ್ರಾರಂಭ.-** (1) ಈ ಅಧಿನಿಯಮವನ್ನು ಕರ್ನಾಟಕ (ರಾಜ್ಯ ಸಿವಿಲ್ ಸೇವೆಗಳಲ್ಲಿಯ ಹುದ್ದೆಗಳಿಗೆ) ಮೀಸಲಾತಿ ಆಧಾರದ ಮೇಲೆ ಬಡ್ತಿ ಹೊಂದಿದ ಸರ್ಕಾರಿ ನೌಕರರ ಜ್ಯೇಷ್ಠತೆಯ ನಿರ್ಧಾರಣೆ ಅಧಿನಿಯಮ, 2002 ಎಂದು ಕರೆಯತಕ್ಕದ್ದು.

(2) ಇದು 1995ರ ಜೂನ್ ಹದಿನೇಳನೇ ದಿನಾಂಕದಿಂದ ಜಾರಿಗೆ ಬಂದಿರುವುದಾಗಿ ಭಾವಿಸತಕ್ಕದ್ದು.

2. **ಪರಿಭಾಷೆಗಳು.-** ಈ ಅಧಿನಿಯಮದಲ್ಲಿ ಸಂದರ್ಭವು ಅನ್ಯಥಾ ಅಗತ್ಯ ಪಡಿಸಿದ ಹೊರತು,-

(ಎ) 'ಸರ್ಕಾರ' ಎಂದರೆ, ಕರ್ನಾಟಕ ಸರ್ಕಾರ

(ಬಿ) 'ಸರ್ಕಾರಿ ನೌಕರ' ಎಂದರೆ, ಕರ್ನಾಟಕ ರಾಜ್ಯದ ಸಿವಿಲ್ ಸೇವೆಗಳ ಸದಸ್ಯನಾಗಿರುವ ಅಥವಾ ಕರ್ನಾಟಕ ರಾಜ್ಯ ವ್ಯವಹಾರಗಳಿಗೆ ಸಂಬಂಧಿಸಿದಂತೆ ಒಂದು ಸಿವಿಲ್ ಹುದ್ದೆಯನ್ನು ಧಾರಣ ಮಾಡಿದ ಒಬ್ಬ ವ್ಯಕ್ತಿ ಮತ್ತು ಇದು ಯಾರ ಸೇವೆಯನ್ನು ಭಾರತ ಸರ್ಕಾರಕ್ಕೆ, ಇನ್ನೊಂದು ರಾಜ್ಯದ ಸರ್ಕಾರಕ್ಕೆ, ಸ್ಥಳೀಯ ಪ್ರಾಧಿಕಾರಕ್ಕೆ ನಿಗಮಿತವಾಗಿರುವ ಅಥವಾ ಆಗಿಲ್ಲದಿರುವ ಯಾವೊಬ್ಬ ವ್ಯಕ್ತಿ ಅಥವಾ ವ್ಯಕ್ತಿಗಳಿಗೆ ತಾತ್ಕಾಲಿಕವಾಗಿ ಬಿಟ್ಟು ಕೊಡಲಾಗಿದೆಯೋ ಆ ಯಾವನೇ ವ್ಯಕ್ತಿಯನ್ನು ಒಳಗೊಳ್ಳುತ್ತದೆ.

(ಸಿ) 'ಮೀಸಲಾತಿ ಆದೇಶ' ಎಂದರೆ, ಕಾಲಕಾಲಕ್ಕೆ ಮಾರ್ಪಾಡು ಮಾಡಲಾದಂತೆ, ಬಡ್ತಿಯಲ್ಲಿ ಮೀಸಲಾತಿ ನೀತಿಯನ್ನು ಒಳಗೊಂಡ ಸರ್ಕಾರಿ ಆದೇಶ ಸಂಖ್ಯೆ: ಡಿಪಿಎಆರ್ 29 ಎಸ್‌ಬಿಸಿ 77, ದಿನಾಂಕ: 27ನೇ ಏಪ್ರಿಲ್ 1978.

3. **ಮೀಸಲಾತಿ ಆಧಾರದ ಮೇಲೆ ಬಡ್ತಿ ಹೊಂದಿದ ಸರ್ಕಾರಿ ನೌಕರರ ಜ್ಯೇಷ್ಠತೆಯ ನಿರ್ಧಾರಣೆ.-** ತತ್ಕಾಲದಲ್ಲಿ ಜಾರಿಯಲ್ಲಿರುವ ಯಾವುದೇ ಕಾನೂನಿನಲ್ಲಿ ಏನೇ ಒಳಗೊಂಡಿದ್ದರೂ ಮೀಸಲಾತಿ ಆದೇಶದಲ್ಲಿ ಉಪಬಂಧಿಸಲಾದಂತೆ ಬಡ್ತಿಯಲ್ಲಿ ಮೀಸಲಾತಿ ನೀತಿಗನುಸಾರವಾಗಿ ಬಡ್ತಿ ಹೊಂದಿದ ಅನುಸೂಚಿತ ಜಾತಿಗಳು ಮತ್ತು ಅನುಸೂಚಿತ ಬುಡಕಟ್ಟುಗಳಿಗೆ ಸೇರಿದ ಸರ್ಕಾರಿ ನೌಕರರು ತತ್ಪರಿಣಾಮದ ಜ್ಯೇಷ್ಠತೆಗೆ ಹಕ್ಕುಳ್ಳವರಾಗಿರತಕ್ಕದ್ದು. ಜ್ಯೇಷ್ಠತೆಯನ್ನು ಒಂದು ವೃಂದದಲ್ಲಿ ಸಲ್ಲಿಸಿದ ಸೇವಾವಧಿಯ ಆಧಾರದ ಮೇಲೆ ನಿರ್ಧರಿಸತಕ್ಕದ್ದು:

ಪರಂತು, ಅನುಸೂಚಿತ ಜಾತಿಗಳು ಮತ್ತು ಅನುಸೂಚಿತ ಬುಡಕಟ್ಟುಗಳಿಗೆ ಸೇರಿದ ಸರ್ಕಾರಿ ನೌಕರರಿಗೆ ಹಾಗೂ ಮೀಸಲಿಟ್ಟಿರದ ಪ್ರವರ್ಗಕ್ಕೆ ಸೇರಿದ ಸರ್ಕಾರಿ ನೌಕರರಿಗೆ ಒಂದೇ ಆದೇಶದ ಮೂಲಕ ಒಂದೇ ಸಮಯದಲ್ಲಿ ಒಂದು ಪ್ರವರ್ಗಕ್ಕೆ ಬಡ್ತಿ ನೀಡಿದಾಗ ಕೆಳಗಿನ ಕೇಡರಿನಲ್ಲಿ ಅವರ ಪರಸ್ಪರ ಜ್ಯೇಷ್ಠತೆಯ ಆಧಾರದ ಮೇಲೆ ಅವರ ಪರಸ್ಪರ ಜ್ಯೇಷ್ಠತೆಯನ್ನು ನಿರ್ಧರಿಸತಕ್ಕದ್ದು:

ಮತ್ತು ಪರಂತು, ಒಂದು ಕೇಡರಿನಲ್ಲಿಯ ಹುದ್ದೆಗಳನ್ನು ಅವುಗಳಿಗೆ ಅನ್ವಯವಾಗತಕ್ಕ ನೇಮಕಾತಿ ನಿಯಮಗಳಿಗೆ ಅನುಸಾರವಾಗಿ ಕೆಳಗಿನ ಎರಡು ಅಥವಾ ಹೆಚ್ಚು ಕೇಡರುಗಳಿಂದ ಬಡ್ತಿಯ ಮೂಲಕ ತುಂಬ ಬೇಕಾದಾಗ,-

(i) ಕೆಳಗಿನ ಕೇಡರುಗಳ ಪೈಕಿ ಪ್ರತಿಯೊಂದಕ್ಕೆ ಬಡ್ತಿಯ (ಉನ್ನತ) ಕೇಡರಿನಲ್ಲಿ ಲಭ್ಯವಿರುವ ಖಾಲಿ ಸ್ಥಾನಗಳ ಸಂಖ್ಯೆಯನ್ನು ಅದಕ್ಕೆ ಅನ್ವಯವಾಗುವ ನೇಮಕಾತಿ ನಿಯಮಗಳಿಗೆ ಅನುಸಾರವಾಗಿ ಲೆಕ್ಕ ಹಾಕತಕ್ಕದ್ದು; ಮತ್ತು

(ii) ಆ ಕೇಡರುಗಳ ಪೈಕಿ ಪ್ರತಿಯೊಂದು ಕೇಡರಿನ ಸಂಬಂಧದಲ್ಲಿ ಹಾಗೆ ಲೆಕ್ಕ ಹಾಕಲಾದ ಖಾಲಿ ಸ್ಥಾನಗಳಿಗೆ ರೋಸ್ಟರನ್ನು ಪ್ರತ್ಯೇಕವಾಗಿ ಅನ್ವಯಿಸತಕ್ಕದ್ದು.

ಅಲ್ಲದೆ ಪರಂತು, ಮೀಸಲಾತಿ ಆದೇಶದಲ್ಲಿ ನಿರ್ದಿಷ್ಟಪಡಿಸಿದ ರೋಸ್ಟರ್ ಬಿಂದುಗಳ ಕ್ರಮ ಸಂಖ್ಯೆಗಳನ್ನು ಒಂದು ಸಮಯಕ್ಕೆ ಬಡ್ತಿಗಾಗಿ ಮೀಸಲಿಟ್ಟ ಖಾಲಿ ಸ್ಥಾನಗಳ ಸಂಖ್ಯೆಯನ್ನು ಲೆಕ್ಕ ಹಾಕುವುದಕ್ಕಾಗಿ ಮಾತ್ರ ಬಳಸಲು ಉದ್ದೇಶಿಸಲಾಗಿದೆಯೇ ಹೊರತು ಅಂಥ ರೋಸ್ಟರ್ ಬಿಂದುಗಳು, ಒಂದೇ ಕಾಲದಲ್ಲಿ ಬಡ್ತಿ ನೀಡಲಾದ ಅನುಸೂಚಿತ ಜಾತಿಗಳು ಮತ್ತು ಅನುಸೂಚಿತ ಬುಡಕಟ್ಟುಗಳಿಗೆ ಸೇರಿದ ಸರ್ಕಾರಿ ನೌಕರರ ಮತ್ತು ಮೀಸಲಿಟ್ಟಿರದ ಪ್ರವರ್ಗಕ್ಕೆ ಸೇರಿದ ಸರ್ಕಾರಿ ನೌಕರರ ಸಂಬಂಧದಲ್ಲಿ ಪರಸ್ಪರ ಜ್ಯೇಷ್ಠತೆಯನ್ನು ನಿರ್ಧರಿಸುವ ಸಲುವಾಗಿ ಉದ್ದೇಶಿಸಲಾಗಿಲ್ಲ ಮತ್ತು ಅಂಥ ಪರಸ್ಪರ ಜ್ಯೇಷ್ಠತೆಯನ್ನು, ಈ ಅಧಿನಿಯಮಕ್ಕೆ ಅನುಬಂಧಿಸಲಾದ ಅನುಸೂಚಿಯಲ್ಲಿ ದೃಷ್ಟಾಂತ ಪೂರ್ವಕವಾಗಿ ಹೇಳಲಾದಂತೆ ಯಾವ ಕೇಡರಿನಿಂದ ಅವರು ಬಡ್ತಿ ಹೊಂದಿದ್ದಾರೆಯೋ ಆ ಕೇಡರಿನಲ್ಲಿಯ ಅವರ ಪರಸ್ಪರ ಜ್ಯೇಷ್ಠತೆಯ ಮೂಲಕ ನಿರ್ಧರಿಸತಕ್ಕದ್ದು.

**4. 1978ರ ಏಪ್ರಿಲ್ 27ರ ತರುವಾಯದಿಂದ ಈಗಾಗಲೇ ನೀಡಲಾಗಿರುವ ತತ್ಪರಿಣಾಮದ ಜ್ಯೇಷ್ಠತೆಯ ಸಂರಕ್ಷಣೆ.-** ಈ ಅಧಿನಿಯಮದಲ್ಲಿ ಅಥವಾ ತತ್ಕಾಲದಲ್ಲಿ ಜಾರಿಯಲ್ಲಿರುವ ಯಾವುದೇ ಕಾನೂನಿನಲ್ಲಿ ಏನೇ ಒಳಗೊಂಡಿದ್ದರೂ, ಮೀಸಲಾತಿ ಆದೇಶದಲ್ಲಿ ಉಪಬಂಧಿಸಲಾದಂತೆ ಬಡ್ತಿಯಲ್ಲಿ ಮೀಸಲಾತಿ ಆದೇಶ ನೀತಿಗನುಸಾರವಾಗಿ ಹತ್ತೊಂಭತ್ತನೂರಾ ಎಪ್ಪತ್ತೆಂಟರ ಏಪ್ರಿಲ್ ಇಪ್ಪತ್ತೇಳನೇ ದಿನಾಂಕದಿಂದ ಜಾರಿಗೆ ಬರುವಂತೆ ಬಡ್ತಿ ಹೊಂದಿದ ಅನುಸೂಚಿತ ಜಾತಿಗಳು ಮತ್ತು ಅನುಸೂಚಿತ ಬುಡಕಟ್ಟುಗಳಿಗೆ ಸೇರಿದ ಸರ್ಕಾರಿ ನೌಕರರಿಗೆ ಈಗಾಗಲೇ ನೀಡಲಾಗಿರುವ ತತ್ಪರಿಣಾಮದ ಜ್ಯೇಷ್ಠತೆಯು, ಸಿಂಧುವಾಗಿರತಕ್ಕದ್ದು ಮತ್ತು ಅದನ್ನು ಸಂರಕ್ಷಿಸತಕ್ಕದ್ದು ಹಾಗೂ ಅದನ್ನು ಭಂಗಗೊಳಿಸತಕ್ಕದ್ದಲ್ಲ.

**5. ನಿಯಮಗಳ ರಚನಾಧಿಕಾರ.-** (1) ರಾಜ್ಯ ಸರ್ಕಾರವು, ಈ ಅಧಿನಿಯಮದ ಉದ್ದೇಶಗಳನ್ನು ನೆರವೇರಿಸುವುದಕ್ಕಾಗಿ ತಾನು ಅವಶ್ಯಕವೆಂದು ಭಾವಿಸಿದಲ್ಲಿ, ಅಧಿಸೂಚನೆಯ ಮೂಲಕ ನಿಯಮಗಳನ್ನು ರಚಿಸಬಹುದು.

(2) ಈ ಅಧಿನಿಯಮದ ಅಡಿಯಲ್ಲಿ ರಚಿಸಲಾದ ಪ್ರತಿಯೊಂದು ನಿಯಮವನ್ನು ಅದನ್ನು ರಚಿಸಿದ ತರುವಾಯ ಆದಷ್ಟು ಬೇಗನೆ ರಾಜ್ಯ ವಿಧಾನ ಮಂಡಲದ ಪ್ರತಿಯೊಂದು ಸದನದ ಮುಂದೆ ಅದು ಅಧಿವೇಶನದಲ್ಲಿರುವಾಗ, ಒಂದು ಅಧಿವೇಶನದಲ್ಲಿ ಅಥವಾ ಒಂದಾದ ಮೇಲೊಂದರಂತೆ ಬರುವ ಎರಡು ಅಥವಾ ಹೆಚ್ಚು ಅಧಿವೇಶನಗಳಲ್ಲಿ ಅಡಕವಾಗಬಹುದಾದ ಒಟ್ಟು ಮೂವತ್ತು ದಿನಗಳ ಅವಧಿಯವರೆಗೆ ಮಂಡಿಸತಕ್ಕದ್ದು ಮತ್ತು ಅದನ್ನು ಹಾಗೆ ಮಂಡಿಸಿದ ಅಧಿವೇಶನದ ಅಥವಾ ನಿಕಟ ತರುವಾಯದ ಅಧಿವೇಶನಗಳ ಮುಕ್ತಾಯಕ್ಕೆ ಮುಂಚೆ, ಆ ನಿಯಮದಲ್ಲಿ ಯಾವುದೇ ಮಾರ್ಪಾಟನ್ನು ಮಾಡಬೇಕೆಂದು ಎರಡೂ ಸದನಗಳು ಒಪ್ಪಿದರೆ ಅಥವಾ ಆ ನಿಯಮವನ್ನು ಮಾಡಕೂಡದೆಂದು ಎರಡೂ ಸದನಗಳು ಒಪ್ಪಿದರೆ, ಆ ತರುವಾಯ ಆ ನಿಯಮವು ಹಾಗೆ ಮಾರ್ಪಾಟು ಹೊಂದಿದ ರೂಪದಲ್ಲಿ ಮಾತ್ರವೇ ಪರಿಣಾಮಕಾರಿಯಾಗತಕ್ಕದ್ದು ಅಥವಾ ಸಂದರ್ಭಾನುಸಾರ

ಪರಿಣಾಮಕಾರಿಯಾಗತಕ್ಕದ್ದಲ್ಲ; ಆದಾಗ್ಯೂ ಅಂಥ ಯಾವುದೇ ಮಾರ್ಪಾಟು ಅಥವಾ ರದ್ದಿಯಾತಿಯು ಆ ನಿಯಮದ ಮೇರೆಗೆ ತತ್ಪೂರ್ವದಲ್ಲಿ ಮಾಡಲಾದ ಯಾವುದೇ ಕಾರ್ಯದ ಸಿಂಧುತ್ವಕ್ಕೆ ಪ್ರತಿಕೂಲ ಪರಿಣಾಮವನ್ನುಂಟು ಮಾಡತಕ್ಕದ್ದಲ್ಲ.

**6. ತೊಂದರೆಗಳನ್ನು ನಿವಾರಿಸಲು ಅಧಿಕಾರ.-** (1) ಈ ಅಧಿನಿಯಮದ ಉಪಬಂಧಗಳನ್ನು ಜಾರಿಗೊಳಿಸುವಲ್ಲಿ ಯಾವುದೇ ತೊಂದರೆಯು ಉದ್ಭವಿಸಿದರೆ, ರಾಜ್ಯ ಸರ್ಕಾರವು, ಸರ್ಕಾರಿ ರಾಜ್ಯ ಪತ್ರದಲ್ಲಿ ಆದೇಶವನ್ನು ಪ್ರಕಟಿಸುವ ಮೂಲಕ ಅಂಥ ತೊಂದರೆಯನ್ನು ನಿವಾರಿಸುವ ಉದ್ದೇಶಕ್ಕಾಗಿ ಈ ಅಧಿನಿಯಮದ ಉಪಬಂಧಗಳಿಗೆ ಅಸಂಗತವಾಗದಂತೆ ತನಗೆ ಅಗತ್ಯವೆಂದು ಅಥವಾ ಯುಕ್ತವೆಂದು ಕಂಡುಬರುವ ಅಂಥ ಉಪಬಂಧಗಳನ್ನು ರಚಿಸಬಹುದು:

ಪರಂತು, ಈ ಅಧಿನಿಯಮವು ಪ್ರಾರಂಭವಾದ ದಿನಾಂಕದಿಂದ ಎರಡು ವರ್ಷಗಳ ಅವಧಿಯು ಮುಕ್ತಾಯವಾದ ತರುವಾಯ ಯಾವುದೇ ಆದೇಶವನ್ನು ಹೊರಡಿಸತಕ್ಕದ್ದಲ್ಲ.

(2) ಈ ಪ್ರಕರಣದ ಅಡಿಯಲ್ಲಿ ಮಾಡಿದ ಪ್ರತಿಯೊಂದು ಆದೇಶವನ್ನು ಅದನ್ನು ಮಾಡಿದ ತರುವಾಯ ಆದಷ್ಟು ಬೇಗನೆ ರಾಜ್ಯ ವಿಧಾನ ಮಂಡಲದ ಪ್ರತಿಯೊಂದು ಸದನದ ಮುಂದೆ ಮಂಡಿಸತಕ್ಕದ್ದು.

**7. ನಿರಸನ ಮತ್ತು ಉಳಿಸುವಿಕೆಗಳು.-** (1) ಕರ್ನಾಟಕ (ರಾಜ್ಯ ಸಿವಿಲ್ ಸೇವೆಗಳಲ್ಲಿಯ ಹುದ್ದೆಗಳಿಗೆ) ಮೀಸಲಾತಿ ಆಧಾರದ ಮೇಲೆ ಬಡ್ತಿ ಹೊಂದಿದ ಸರ್ಕಾರಿ ನೌಕರರ ಜೇಷ್ಠತೆಯ ನಿರ್ಧಾರಣೆ ಅಧ್ಯಾದೇಶ (ಸಂಖ್ಯೆ 2), 2002 ನ್ನು (2002ರ ಕರ್ನಾಟಕ ಅಧ್ಯಾದೇಶ 5) ಈ ಮೂಲಕ ನಿರಸನಗೊಳಿಸಲಾಗಿದೆ.

(2) ಹಾಗೆ ನಿರಸನಗೊಂಡಿದಾಗ್ಯೂ ಸದರಿ ಅಧ್ಯಾದೇಶದ ಮೇರೆಗೆ ಮಾಡಿದ ಯಾವುದೇ ಕಾರ್ಯ ಅಥವಾ ಕೈಗೊಂಡ ಯಾವುದೇ ಕ್ರಮವನ್ನು ಈ ಅಧಿನಿಯಮದ ಮೇರೆಗೆ ಮಾಡಲಾಗಿದೆ ಅಥವಾ ಕೈಗೊಳ್ಳಲಾಗಿದೆ ಎಂದು ಭಾವಿಸತಕ್ಕದ್ದು.

ಅನುಸೂಚಿ

( 3ನೇ ಪ್ರಕರಣದ ಪರಂತುಕವನ್ನು ನೋಡಿ)

ಒಂದೇ ಸಮಯದಲ್ಲಿ ಒಂದೇ ಆದೇಶದಿಂದ ಅಸಿಸ್ಟೆಂಟ್ ಕಮಿಷನರರ ಮೂರು ಖಾಲಿ ಹುದ್ದೆಗಳನ್ನು ಭರ್ತಿಮಾಡಬೇಕಾದರೆ, ಖಾಲಿ ಹುದ್ದೆಗಳ ವರ್ಗಿಕರಣವು ಈ ಮುಂದಿನಂತಿರುವುದು:

1ನೇ ...................... ಅನುಸೂಚಿತ ಜಾತಿ

2ನೇ ..................... ಅನುಸೂಚಿತ ಬುಡಕಟ್ಟು

3ನೇ ...................... ಮೀಸಲಿಟ್ಟಿರದ

ತಹಶೀಲ್ದಾರರ ಕೇಡರಿನಲ್ಲಿರುವ ಅರ್ಹತೆ ಮತ್ತು ವಿದ್ಯಾರ್ಹತೆಯನ್ನು ಪಡೆದ ಮತ್ತು ಆ ಸಮಯದಲ್ಲಿ ಪರಿಗಣಿಸಬೇಕಾದ ವ್ಯಕ್ತಿಗಳ ಜ್ಯೇಷ್ಠತೆಯು ಈ ಮುಂದೆ ನಮೂದಿಸಲಾದಂತೆ ಇದ್ದರೆ,

ಎ ...................... ಅನುಸೂಚಿತ ಜಾತಿ

ಬಿ ...................... ಮೀಸಲಿಟ್ಟಿರದ

ಸಿ ...................... ಅನುಸೂಚಿತ ಬುಡಕಟ್ಟು

ಡಿ ...................... ಮೀಸಲಿಟ್ಟಿರದ

ಇ ...................... ಮೀಸಲಿಟ್ಟಿರದ

ಆಗ, ಬಡ್ತಿಯ ನಂತರ, ಸಹಾಯಕ ಅಸಿಸ್ಟೆಂಟ್ ಕಮಿಷನರರ ಅವರ ಪರಸ್ಪರ ಜ್ಯೇಷ್ಠತೆಯು ಈ ಮುಂದಿನಂತಾಗುವುದು:

ಎ ...................... ಅನುಸೂಚಿತ ಜಾತಿ

ಬಿ ...................... ಮಿಸಲಿಟ್ಟಿರದ

ಸಿ ...................... ಅನುಸೂಚಿತ ಬುಡಕಟ್ಟು

ಇದಕ್ಕೆ ಪ್ರತಿಯಾಗಿ ತಹಶೀಲ್ದಾರರ ಜ್ಯೇಷ್ಠತೆಯು ಆ ಸಮಯದಲ್ಲಿ ಈ ಮುಂದಿನಂತೆ ಇದ್ದರೆ,

ಎ ...................... ಮಿಸಲಿಟ್ಟಿರದ

ಬಿ ...................... ಮಿಸಲಿಟ್ಟಿರದ

ಸಿ ...................... ಮಿಸಲಿಟ್ಟಿರದ

ಡಿ ...................... ಅನುಸೂಚಿತ ಜಾತಿ

ಇ ...................... ಅನುಸೂಚಿತ ಬುಡಕಟ್ಟು

ಆಗ ಬಡ್ತಿಯ ನಂತರ ಸಹಾಯಕ ಅಸಿಸ್ಟೆಂಟ್ ಕಮಿಷನರರ ಅವರ ಪರಸ್ಪರ ಜ್ಯೇಷ್ಠತೆಯು ಈ ಮುಂದಿನಂತಿರುತ್ತದೆ:

ಎ ...................... ಮಿಸಲಿಟ್ಟಿರದ

ಡಿ ...................... ಅನುಸೂಚಿತ ಜಾತಿ

ಇ ...................... ಅನುಸೂಚಿತ ಬುಡಕಟ್ಟು

# THE KARNATAKA DETERMINATION OF SENIORITY OF THE GOVERNMENT SERVANTS PROMOTED ON THE BASIS OF RESERVATION (TO THE POSTS IN THE CIVIL SERVICES OF THE STATE) ACT, 2002.

## ARRANGEMENT OF SECTIONS

Statement of Objects and Reasons:

**Sections:**

1. Short title and commencement
2. Definitions
3. Determination of seniority of the Government servants promoted on the basis of Reservation.
4. Protection of consequential seniority already accorded from 27th April, 1978 onwards.
5. Power to make rules.
6. Power to remove difficulties.
7. Repeal and savings.
8. Schedule.

## STATEMENT OF OBJECTS AND REASONS

The Government of Karnataka has introduced the policy of reservation in promotion in favour of the Government Servants belonging to the Scheduled Castes and the Scheduled Tribes as per the Government Order No. DPAR 29 SBC 77 dated 27-4-1978 (henceforth called, “Reservation Order”).

Paragraph 7 of the Reservation Order stipulates that the inter-se seniority amongst persons promoted in accordance with that order on any occasion has to be determined, in the manner provided in rule 4 or 4-A, as the case may be, of the Karnataka Government Servants (Seniority) Rules, 1957.

The Supreme Court of India, in its Judgment dated 1-12-2000, in the case of M.G. Badappanavar and Another Versus State of Karnataka and others in Civil Appeal Nos. 6970-6971 of 2000 with Civil Appeal No. 6972 of 2000 (AIR 2001 SC 260) while dealing with the issue of determination of seniority inter-se between the persons belonging to the reserved categories and the general category, in pursuance of the ratio of the decision of the Constitution Bench in Ajit Singh and Others (II) Vs State of Punjab and others-(1999) 7 SCC

209- has examined rule 2(c), rule 4 and rule 4-A of the Karnataka Government Servants' (Seniority) Rules, 1957 and has observed that there is no specific rule therein permitting seniority to be counted in respect of a person promoted against a (reserved) roster point.

While it is true that rules 2(c), 4 and 4A of the Karnataka Government Servants (Seniority) Rules, 1957 do not cover promotions made on the basis of roster, paragraph 7 of the Reservation Order introducing the policy of reservation in promotion stipulates the manner of determining the inter-se seniority amongst persons promoted on any occasion of promotion (on the basis of reservation). This provision is independent of the said rules contained in the Karnataka Government Servants (Seniority) Rules, 1957 as the Reservation Order is a self-contained code regulating promotions on the basis of reservation.

Subsequently, the Parliament has enacted the Constitution (Eighty Fifth Amendment) Act, 2001 with retrospective effect from 17-6-1995 providing for consequential seniority in the case of promotion on the basis of reservation.

Therefore, it is considered necessary to remove any ambiguity and to clarify that the Government Servants belonging to the Scheduled Castes and the Scheduled Tribes promoted in accordance with the policy of reservation in promotion contained in the Reservation Order shall be entitled to seniority as it is available to the Government Servants belonging to the other categories.

Since the matter was urgent and the Karnataka Legislative Council was not in session, the Karnataka Determination of Seniority of the Government Servants Promoted on the basis of Reservation (to the posts in the civil services of the State) Ordinance, 2002 (Karnataka Ordinance 2 of 2002) and The Karnataka Determination of Seniority of the Government Servants Promoted on the basis of Reservation (to the posts in the civil services of the State) (Amendment) Ordinance, 2002. (Karnataka Ordinance 3 of 2002) were promulgated to achieve the above object.

This Bill seeks to replace the said Ordinances.

Hence the Bill.

**KARNATAKA ACT 10 of 2002**

(First published in the Karnataka Gazette Extraordinary of the fourteenth day of August 2002)

# THE KARNATAKA DETERMINATION OF SENIORITY OF THE GOVERNMENT SERVANTS PROMOTED ON THE BASIS OF RESERVATION (TO THE POSTS IN THE CIVIL SERVICES OF THE STATE) ACT, 2002.

(Received the Assent of the Governor on the twelfth day of August **2002)**

An Act for Determination of Seniority of the Government Servants Promoted on the Basis of Reservation to the Posts in the Civil Services of the State:

Whereas the Government of Karnataka has introduced the policy of reservation in promotion in favour of the Government Servants belonging to the Scheduled Castes and the Scheduled Tribes as per the Government Order No. DPAR 29 SBC 77 dated 27.4.1978.

Whereas paragraph 7 of the Reservation Order stipulates that the inter-se seniority amongst persons promoted in accordance with that order on any occasion has to be determined, in the manner provided in rule 4 or 4-A, as the case may be, of the Karnataka Government Servants (Seniority) Rules, 1957.

Whereas the Supreme Court of India, in its Judgment dated 1 -12-2000, in the case of M.G. Badappanavar and Another Versus State of Karnataka and others in Civil Appeal Nos. 6970-6971 of 2000 with Civil Appeal No. 6972 of 2000 (AIR 2001 SC 260) while dealing with the issue of determination of seniority inter-se between the persons belonging to the reserved categories and the general category, in pursuance of the ratio of the decision of the Constitution Bench in Ajit Singh and Others (II) Vs State of Punjab and others-(1999) 7 SCC 209 has examined rule 2(c), rule 4 and rule 4-A of the Karnataka Government Servants' (Seniority) Rules, 1957 and has observed that there is no specific rule therein permitting seniority to be counted in respect of a person promoted against a (reserved) roster point.

Whereas while it is true that rules 2(c), 4 and 4A of the Karnataka Government Servants (Seniority) Rules, 1957 do not specifically provide for giving seniority in respect of promotions made on the basis of roster, paragraph 7 of the Reservation Order introducing the policy of reservation in promotion stipulates the manner of determining the inter-se seniority amongst persons promoted on any occasion of promotion (on the basis of reservation).

This provision is independent of the said rules contained in the Karnataka Government Servants (Seniority) Rules, 1957 as the Reservation Order is a self-contained code regulating promotions on the basis of reservation.

Whereas subsequently, the Parliament has enacted the Constitution (Eighty Fifth Amendment) Act, 2001 with retrospective effect from 17-6-1995 providing for consequential seniority in the case of promotion on the basis of reservation.

Therefore, it is considered necessary to remove any ambiguity and to clarify that the Government Servants belonging to the Scheduled Castes and the Scheduled Tribes promoted in accordance with the policy of reservation in promotion contained in the Reservation Order shall be entitled to seniority as it is available to the Government Servants belonging to the other categories.

Be it enacted by the Karnataka State Legislature in the fifty third year of the Republic of India, as follows:-

**1. Short title and commencement.-** (1) This Act may be called the Karnataka Determination of Seniority of the Government Servants Promoted on the basis of Reservation (to the posts in the civil services of the State) Act, 2002.

(2) It shall be deemed to have come into force on the Seventeenth day of June 1995.

**2. Definitions. -** In this Act unless the context otherwise requires,-

(a) "Government" means the Government of Karnataka.

(b) "Government Servant" means a person who is a member of the Civil Services of the State of Karnataka or who holds a Civil post in connection with the affairs of the State of Karnataka and includes any person whose services are temporarily placed at the disposal of the Government of India, the Government of another State, a local authority, any person or persons whether incorporated or not.

(c) "Reservation Order" means the Government Order No. DPAR 29 SBC 77 dated 27 th April 1978 containing the policy of reservation in promotion, as modified from time to time.

**3. Determination of Seniority of the Government Servants Promoted on the basis of Reservation.-** Notwithstanding anything contained in any other law for the time being in force, the Government Servants belonging to the Scheduled Castes and the Scheduled Tribes promoted in accordance with the policy of reservation in promotion provided for in the Reservation Order shall be entitled to consequential seniority. Seniority shall be determined on the basis of the length of service in a cadre.

Provided that the seniority inter-se of the Government Servants belonging to the Scheduled Castes and the Scheduled Tribes as well as those belonging to the unreserved category, promoted to a cadre, at the same time by a common

order, shall be determined on the basis of their seniority inter-se, in the lower cadre.

Provided further that where the posts in a cadre, according to the rules of recruitment applicable to them are required to be filled by promotion from two or more lower cadres,-

(i) The number of vacancies available in the promotional (higher) cadre for each of the lower cadres according to the rules of recruitment applicable to it shall be calculated; and

(ii) The roster shall be applied separately to the number of vacancies so calculated in respect of each of those lower cadres;

Provided also that the serial numbers of the roster points specified in the Reservation Order are intended only to facilitate calculation of the number of vacancies reserved for promotion at a time and such roster points are not intended to determine inter-se seniority of the Government Servants belonging to the Scheduled Castes and the Scheduled Tribes vis-a-vis the Government Servants belonging to the unreserved category promoted at the same time and such inter-se seniority shall be determined by their seniority inter-se in the cadre from which they are promoted, as illustrated in the Schedule appended to this Act.

**4. Protection of consequential seniority already accorded from 27th April, 1978, onwards.-** Notwithstanding anything contained in this Act or any other law for the time being in force, the consequential seniority already accorded to the Government servants belonging to the Scheduled Castes and the Scheduled Tribes who were promoted in accordance with the policy of reservation in promotion provided for in the Reservation Order with effect from the Twenty Seventh Day of April, Nineteen Hundred and Seventy Eight shall be valid and shall be protected and shall not be disturbed.

**5. Power to make rules.-** (1) The State Government, if it deems necessary, may by notification make rules to carry out the purposes of this Act.

(2) Every rule made under this Act shall be laid as soon as may be after it is made before each House of the State Legislature, while it is in session for a total period of thirty days, which may be comprised in one session or in two or more successive sessions, and if before the expiry of the session, immediately following the session or the successive sessions aforesaid, both Houses agree in making any modification in the rule or both Houses agree that the rule should not be made the rule shall thereafter have effect only in such modified form or be of no effect, as the case may be, so however that any such modification or annulment shall be without prejudice to the validity of anything previously done under that rule.

**6. Power to remove difficulties.-** (1) If any difficulty arises in giving effect to the provisions of this Act, the Government may by order published in the official Gazette, make provisions not inconsistent with the provisions of this Act as appear to it be necessary or expedient for removing the difficulty:

Provided that no such order shall be made after the expiry of a period of two years from the date of commencement of this Act.

(2) Every order made under this section shall as soon as may be after it is made, be laid before each House of the State Legislature.

**7. Repeal and Savings.-** (1) The Karnataka Determination of Seniority of the Government Servants Promoted on the basis of Reservation (to the posts in the civil services of the State) Ordinance (No.2), 2002 (Karnataka Ordinance 5 of 2002) is hereby repealed.

(2) Notwithstanding such repeal anything done or any action taken under the said Ordinances shall be deemed to have been done or taken Under this Act.

## SCHEDULE

(see the proviso to section 3)

If three vacancies of Assistant Commissioner are to be filled by promotion at the same time, by a common order, classification of vacancies would be as follows :

1st ... Scheduled Caste
2nd ... Scheduled Tribe
3rd ... Unreserved

If the seniority of persons in the cadre of Tahsildars who are eligible and qualified and whose cases are to be considered at that time is as indicated below,

A ... Scheduled Caste
B ... Unreserved
C ... Scheduled Tribe
D ... Unreserved
E ... Unreserved

then, on promotion, their inter-se seniority in the cadre of Assistant Commissioners, will be as follows :

A ... Scheduled Caste
B ... Unreserved
C ... Scheduled Tribe

If on the other hand the seniority of the Tahsildars at that time is as indicated below,

A ... Unreserved
B ... Unreserved
C ... Unreserved
D ... Scheduled Caste
E ... Scheduled Tribe

then their inter-se seniority, on promotion, in the cadre of Assistant Commissioners will be as follows :

A ... Unreserved
D ... Scheduled Caste
E ... Scheduled Tribe

The above translation of ಕರ್ನಾಟಕ (ರಾಜ್ಯದ ಸಿವಿಲ್ ಸೇವೆಗಳಲ್ಲಿಯ ಹುದ್ದೆಗಳಿಗೆ) ಮೀಸಲಾತಿ ಆಧಾರದ ಮೇಲೆ ಬಡ್ತಿ ಹೊಂದಿದ ಸರ್ಕಾರಿ ನೌಕರರ ಜ್ಯೇಷ್ಠತೆಯ ನಿರ್ಧಾರಣೆ ಅಧಿನಿಯಮ, 2002 (2002 ರ ಕರ್ನಾಟಕ ಅಧಿನಿಯಮ ಸಂಖ್ಯೆ 10) be published in the official Gazette under clause (3) of Article 348 of the constitution of India.

T.N. Chaturvedi
Governor of Karnataka

By Order and in the name of the Governor
of Karnataka

M.R. Hegde
Secretary to Government,
Department of Parliamentary Affairs and
Legislation.

**THE KARNATAKA DETERMINATION OF SENIORITY OF THE GOVERNMENT SERVANTS PROMOTED ON THE BASIS OF RESERVATION (TO THE POSTS IN THE CIVIL SERVICES OF THE STATE) ACT, 2002 has been amended by the following Acts, namely:-**

## Amendments (chronological)

| Sl.No. | Act No. and year | Sections amended | Remarks |
|---|---|---|---|
| 1. | 10 of 2002 | - | - |

## Amendments (section-wise)

| Sections | Act No. and year | Remarks |
|---|---|---|
| - | - | - |